ಎಸಿಎಂಸಿಯಲ್ಲಿ ರೆಸ್‌ಲ್ಯೂಷನ್ ಕೂಡ ನಾವು ಮಾಡಿ ಕಳುಹಿಸಿದ್ದೇವೆ. ನೀವು compensatory ಗ್ರೌಂಡ್ ಮೇಲೆ ನೀವು ಹಾಗೂ ಅವರು ಜಿಲ್ಲಾ ಪಂಚಾಯಿತಿಯವರು ಸ್ವಲ್ಪ ಹಾಕಿ ಆ ಬೇಸಿಸ್ ಕೊಡುತ್ತೇವೆಂದಾದರೂ ಕೂಡ APMC is also ready ಏಕೆಂದರೆ within 5 km area development ಮಾಡಬೇಕೆನ್ನುವ ಅವರ ಒಂದು ಗೈಡ್‌ಲೈನ್ಸ್ ಇದೆ, ಆ ಪ್ರಕಾರ ತಕ್ಕಮಟ್ಟಿಗೆ ದುಡ್ಡನ್ನು ಕೊಡುತ್ತೇವೆ ಎಂದಾಗ, ಆದ್ಯತೆಯ ಮೇರೆಗೆ ಜಿಲ್ಲಾ ಪಂಚಾಯಿತಿಯಿಂದ ತೆಗೆದುಕೊಂಡರೆ ಅವರು ಉಳಿದಿರತಕ್ಕಂಥ ರೋಡ್ ಡೆವಲಪ್‌ಮೆಂಟ್‌ಗೆ ಮತ್ತು ಎಂಬ್ಯಾಕ್‌ಮೆಂಟ್‌ಗೆ ದುಡ್ಡನ್ನು ಕೊಡುವುದಕ್ಕೆ ಅವರು ತಯಾರಿದ್ದಾರೆ. ಹಾಗಾಗಿ ಆದ್ಯತೆಯ ಮೇಲೆ ಅದನ್ನು ತೆಗೆದುಕೊಳ್ಳಬೇಕೆನ್ನುವ ವಿನಂತಿಯನ್ನು ನಾನು ಮಾಡುತ್ತೇನೆ.

ಶ್ರೀ ಸಿ.ಎಂ. ಉದಾಸಿ: ತಮ್ಮ ಸಲಹೆಯನ್ನು ಪರಿಗಣಿಸಿ ತಮ್ಮ ಜೊತೆ ಸಂಪರ್ಕ ಮಾಡಿ ಅದಕ್ಕೆ ಪೂರಕವಾದ ಕಾರ್ಯಕ್ರಮವನ್ನು ರೂಪಿಸುತ್ತೇವೆಂಬ ಭರವಸೆಯನ್ನು ಕೊಡುತ್ತೇನೆ.

ಸನ್ನತಿ ಏತ ನೀರಾವರಿ ಯೋಜನೆ

162 (533) ಶ್ರೀ ಮಲ್ಲಿಕಾರ್ಜುನ್ ಎಂ. ಖರ್ಗೆ (ಗುರುಮಿಠಕಲ್) :– ಮಾನ್ಯ ಜಲ ಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸನ್ನತಿ ಏತ ನೀರಾವರಿ ಯೋಜನೆ ಮಂಜೂರಾಗಿದ್ದು ಯಾವಾಗ;

ಆ) ಅದರ ಅಂದಾಜು ಮೊತ್ತವೆಷ್ಟು ; ಹಾಗೂ ಇದುವರೆವಿಗೂ ಮಾಡಿರುವ ವೆಚ್ಚವೆಷ್ಟು ;

ಇ) ಈಗ ಯೋಜನೆಯ ಕೆಲಸ ಯಾವ ಹಂತದಲ್ಲಿದೆ ;

ಈ) ಈ ಯೋಜನೆಯ ಕಾಮಗಾರಿಯನ್ನು ನಿಗಧಿಪಡಿಸಿದ ಅವಧಿಯಲ್ಲಿ ಮುಗಿಸಲು ಹಾಕಿಕೊಂಡಿರುವ ಕಾರ್ಯಕ್ರಮಗಳು ಯಾವ್ಯಾವು ;

ಉ) ಒಂದು ವೇಳೆ ವಿಳಂಬವಾಗಿದ್ದಲ್ಲಿ ಅದಕ್ಕೆ ಕಾರಣಗಳೇನು ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲ ಸಂಪನ್ಮೂಲ ಸಚಿವರು) –

ಅ) ಸರ್ಕಾರದ ಆದೇಶ ಸಂಖ್ಯೆ: ಜಸಂಇ 1 ಡಬ್ಲ್ಯೂಯುಡಿ 2005 ದಿನಾಂಕ: 31.5.2005ರನ್ವಯ ಮಂಜೂರಾತಿ ನೀಡಲಾಗಿದೆ.

ಆ) ಯೋಜನೆಯ ಅಂದಾಜು ಮೊತ್ತ ರೂ.188.00 ಕೋಟಿಗಳಾಗಿದ್ದು, ಇದುವರೆಗೂ ರೂ.42.57 ಕೋಟಿಗಳು ವೆಚ್ಚವಾಗಿರುತ್ತದೆ.

ಇ) ಬ್ಯಾರೇಜಿನ ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಏತ ನೀರಾವರಿ ಯೋಜನೆಗಾಗಿ ಇನ್‌ಟೇಕ್ ಚಾನಲ್, ಜಾಕ್‌ವೆಲ್ ನಿರ್ಮಾಣ, ಪಂಪ್ ಅಳವಡಿಕೆ, ಸಬ್ ಸ್ಟೇಷನ್, ರೈಸಿಂಗ್ ಮೇನ್ ಮುಂತಾದವುಗಳಿಗಾಗಿ ಟರ್ನ್‌ಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಸ್ವೀಕರಿಸಲಾಗಿದ್ದು, ಟೆಂಡರ್ ಅನುಮೋದನೆ ಹಂತದಲ್ಲಿದೆ.

ಯೋಜನೆಯ ಕಾಲುವೆ ಜಾಲದ ನಿರ್ಮಾಣ ಕುರಿತು ಸರ್ವೆ ತನಿಖಾ ಕಾರ್ಯಗಳನ್ನು ಖಾಸಗಿ ಕನ್ಸಲ್ಟಂಟ್‌ರವರಿಗೆ ವಹಿಸಿಕೊಡಲಾಗಿದ್ದು, ಅವರಿಂದ ವರದಿ ಬಂದಿರುತ್ತದೆ. ವಿವರವಾದ ಅಂದಾಜು ಪತ್ರಿಕೆ ತಯಾರಿಸಲಾಗುತ್ತಿದೆ.

ಈ) ಸದರಿ ಯೋಜನೆಯ ಕಾಮಗಾರಿಗಳನ್ನು ಡಿಸೆಂಬರ್–2007ರ ಒಳಗೆ ಪೂರ್ತಿಗೊಳಿಸಲು ಉದ್ದೇಶಿಸಲಾಗಿದೆ.

ಉ) ಯೋಜನೆಯ ಕಾಮಗಾರಿಗಳು ಕಾರ್ಯಕ್ರಮದಂತೆ ಜರುಗುತ್ತಿವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಸಭಾಧ್ಯಕ್ಷರೆ, ಈ ಪ್ರಶ್ನೆಯನ್ನು ಕೇಳುವಂತಹ ಉದ್ದೇಶವಿಷ್ಟೆ, ಈ ಸನ್ನತಿ ಏತ ನೀರಾವರಿ ಪ್ರಾಜೆಕ್ಟ್ ಇದು ಕೃಷ್ಣ ಬೇಸಿನ್‌ನಲ್ಲಿ 'ಎ' ಸ್ಕೀಂನಲ್ಲಿ ಇರುವಂತಹ ಯೋಜನೆಯಾಗಿದೆ. ಆದರೆ ಇದಕ್ಕೆ ಲಿಫ್ಟ್ ಇರಿಗೇಷನ್ ಮಾಡಿ ಸುಮಾರು ಸಾವಿರಾರು ಎಕರೆಗೆ ನೀರು ಕೊಡಬೇಕು ಎನ್ನುವಂತಹ ಉದ್ದೇಶದಿಂದ ಇದನ್ನು ಸುಮಾರು 188.00 ಕೋಟಿ ರೂಪಾಯಿಗಳಷ್ಟು ತಯಾರು ಮಾಡತಕ್ಕಂತಹ ಯೋಜನೆ. ಆದರೆ ಇತ್ತೀಚೆಗೆ ನಾನು ಪತ್ರಿಕೆಯಲ್ಲಿ ಹಾಗೂ ಮಾಧ್ಯಮಗಳಲ್ಲಿ ನೋಡಿದೆ. ಒಂದೆರಡು ಹಳ್ಳಿಗಳು ಮುಳುಗುತ್ತವೆ ಎಂಬ ನೆಪದಲ್ಲಿ ಪುನಃ ಇದನ್ನು ನಿಲ್ಲಿಸಬೇಕೆಂಬ ಪ್ರಯತ್ನ ನಡೆದಿದೆ. ಹೋದ ಸಲವೂ ಕೂಡ ಸುಮಾರು 35 ವರ್ಷದಿಂದ ಸನ್ನತಿ ಟೆಂಪಲ್ ಮುಳುಗುತ್ತದೆ ಎಂದು ಒಂದು ನೆಪವನ್ನು ಇಟ್ಟುಕೊಂಡು 3–4 ಹಳ್ಳಿಗಳು ಮುಳುಗುತ್ತವೆಂಬ ಕಾರಣವನ್ನು ಮುಂದೆ ಇಟ್ಟು ಅದನ್ನು ಮುಂದಕ್ಕೆ ಹಾಕಿಕೊಂಡು ಬಂದರು. ಕೊನೆಗೆ ನಾನು ಅಂತಿಮವಾದಂತಹ ತೀರ್ಮಾನವನ್ನು ತೆಗೆದುಕೊಂಡು ಇದು ಬರಗಾಲ ಪ್ರದೇಶಕ್ಕೆ ಅನುಕೂಲವಾಗುವಂತಹ ದೃಷ್ಟಿಯಿಂದ ಇದನ್ನು ತೆಗೆದುಕೊಂಡೆ. ಆದರೂ ಪುನಃ ಈ ಬಗ್ಗೆ ಲಾಬಿ ಪ್ರಾರಂಭವಾಗಿದೆ. ಇನ್‌ಫ್ಯಾಕ್ಟ್ ಈ ಬಗ್ಗೆ ಸರ್ವೆ ಮಾಡಿ ಟೆಕ್ನಿಕಲ್ ಕಮಿಟಿ ಹಾಗೂ ಎಲ್ಲಾ ಕಮಿಟಿಗಳು ಸರ್ವೆ ಮಾಡಿ ಈ ನಿರ್ಣಯವನ್ನು ತೆಗೆದುಕೊಂಡೆ. ಅದರೂ ಕೂಡ ಕೆಲವು ಜನರು ಕುಂಟುನೆಪ ಇಟ್ಟು ಇದನ್ನು ಮೊಟಕುಗೊಳಿಸುವ ಬಗ್ಗೆ ಪ್ರಯತ್ನ ನಡೆದಿದೆ. ಅದಕ್ಕಾಗಿ ತಾವು ಈ ಬಗ್ಗೆ ತೀವ್ರಗತಿಯಿಂದ ಇಂಪ್ಲಿಮೆಂಟ್ ಮಾಡುತ್ತೀರೋ ಹೇಗೇ ಅಥವಾ ಈಗ ಏನು

ಕೆಲವು ಜನರು ಮುಂದೆ ಬಂದು ನಿಮಗೆ ಅಪ್ಲಿಕೇಷನ್ ಕೊಟ್ಟಿದ್ದಾರೆ ಆ ಕುಂಟುನೆಪವನ್ನೂ ಸಹ ಮುಂದಿಡುತ್ತಿದ್ದಾರೆ, ಅದರಿಂದ ಇದು ನಿಲ್ಲಿಸುವುದಕ್ಕೆ ಕಾರಣವಾಗಬಾರದು? ಇದು ಆದರೆ ನಮ್ಮ 'ಎ' ಸ್ಕೀಂನಲ್ಲಿ ಏನು ನಮಗೆ ನೀರು ಅಲೋಕೇಟ್ ಆಗಿದೆ, ಆ ಅಲೋಕೇಟ್ ಆದಂತಹ ನೀರಲ್ಲೇ ಸುಮಾರು 4 ರಿಂದ 5 ಟಿಎಂಸಿ ನೀರನ್ನು ನಾವು ಇಟ್ಟಿದ್ದೇವೆ. ಅದಕ್ಕಾಗಿ ದಯವಿಟ್ಟು ಇದರ ಬಗ್ಗೆ ತಾವು ಹೇಳಿಕೆಯನ್ನು ಕೊಟ್ಟರೆ ಒಳ್ಳೆಯದಾಗುತ್ತದೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ಅಪೇಕ್ಷೆ ಪಟ್ಟಹಾಗೆ ಈ ಕಾಮಗಾರಿಯನ್ನು ಡಿಸೆಂಬರ್ 7ರೊಳಗಾಗಿ ನಾವು ಮುಗಿಸುತ್ತೇವೆ. ಇದರ ಬಗ್ಗೆ ಯಾರೇ ಅಡ್ಡ ಬಂದರೂ ಕೂಡ ಇದನ್ನು ನಿಲ್ಲಿಸುವಂತಹ ಪ್ರಶ್ನೆಯಿಲ್ಲ. ಅಕ್ಯುಚ್ಯಲಿ ಇದರ ಮುಖ್ಯ ಬ್ಯಾರೇಜಿನ ಕೆಲಸ ಪ್ರಗತಿಯಲ್ಲಿದೆ, ಗೇಟ್‌ನ ವಿನ್ಯಾಸ ಮಾರ್ಪಾಡು ಆಗಬೇಕಾಗಿದ್ದು ಅದರ ಬಗ್ಗೆ ಸರ್ಕಾರ ಚಿಂತನೆಯನ್ನು ನಡೆಸಿದೆ, ಇಷ್ಟರಲ್ಲಿಯೇ ಆ ಬಗ್ಗೆ ಸೂಕ್ತ ಕ್ರಮವನ್ನು ನಾವು ಕೈಗೊಳ್ಳುತ್ತೇವೆ. ನಿನ್ನೆ ತಾನೇ ಮಾನ್ಯ ಅಧ್ಯಕ್ಷರೆ, ಬೋರ್ಡ್ ಮೀಟಿಂಗ್‌ನಲ್ಲಿ ಇಂಟೇಕ್ ಚಾನಲ್, ಜಾಕ್‌ವೆಲ್ ನಿರ್ಮಾಣ, ಪಂಪ್ ಅಳವಡಿಕೆ ಸಬ್ ಸ್ಟೇಷನ್, ರೈಸಿಂಗ್ ಮೇನ್ ಈ ಕಾಮಗಾರಿಗಳಿಗೆ ನಿನ್ನೆ ಬೋರ್ಡ್ ಮೀಟಿಂಗ್‌ನಲ್ಲಿ 30.99 ಕೋಟಿ ರೂ. ಕಾಮಗಾರಿಗೆ ನಾವು ಅನುಮೋದನೆಯನ್ನು ಕೊಟ್ಟಿದ್ದೇವೆ. ಈ ವಿತರಣಾ ನಾಲೆಯ ಜಾಲದ ಕಾರ್ಯಕ್ಕೆ ಸರ್ವೆ ಕಾರ್ಯ ಅಲೈನ್‌ಮೆಂಟ್ ಮುಗಿದಿದ್ದು ಒಂದು, ಒಂದೂವರೆ ತಿಂಗಳಲ್ಲಿ ಕೆಲಸವನ್ನು ಕೂಡ ನಾವು ಪ್ರಾರಂಭ ಕೂಡ ಮಾಡಿದ್ದೇವೆ. ತಾವು ಏನು ಅನುಮಾನವನ್ನು ಇಟ್ಟುಕೊಂಡಿದ್ದೀರಿ, ಯಾವುದೇ ಕಾರಣಕ್ಕೂ ಈ ಕಾಮಗಾರಿಯು ನಿಲ್ಲುವುದಿಲ್ಲ. ಡಿಸೆಂಬರ್ 7ರೊಳಗಡೆ ಇದನ್ನು ಮುಗಿಸಿಕೊಡುತ್ತೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಇದು ಎಲ್ಲರಿಗೂ ಅನ್ವಯಿಸುತ್ತದೆ. ಇದು ಕೇವಲ ಸನ್ನತಿ ವಿತ ನೀರಾವರಿಗೆ ಅಷ್ಟೇ ಅಲ್ಲ, ನಾವು ಸುಮಾರು 20 ಮತ್ತು 30 ಬ್ಯಾರೇಜ್‌ಸ್ನ್ನು ಕೃಷ್ಣ, ಇದು ಭೀಮ ನದಿಯ ಮೇಲೆ ಬೇರೆ ಬೇರೆ ಕಡೆಗಳಲ್ಲಿ ಪ್ರಾರಂಭವಾಗಿದೆ. ಅದು ಕಾವೇರಿ ಬೇಸಿನ್‌ನಲ್ಲಿರುವಂತಹ ಕೆಲಸ ಇರಬಹುದು, ಕೃಷ್ಣ ಬೇಸಿನ್‌ನಲ್ಲಿ ಇರುವಂತಹ ಕೆಲಸವಿರಬಹುದು, ಅಥವಾ ಬೇರೆ ಸಣ್ಣ ನೀರಾವರಿನಲ್ಲಿಯೂ ಕೂಡ ಇರಬಹುದು. ಇತ್ತೀಚೆಗೆ ತಮಗೆ ಗೊತ್ತಿರುವ ಹಾಗೆ ಸ್ಟೀಲ್ ರೇಟ್, ಹೆಚ್ಚಿಗೆ ಆಗಿದೆ, ಸಿಮೆಂಟ್ ರೇಟ್ ಹೆಚ್ಚಿಗೆ ಆಗಿದೆ, ಇದು ಹೆಚ್ಚಿಗೆ ಆಗಿರುವುದರಿಂದ ಏನಾಗಿದೆ ಎಂದರೆ ಯಾರು

ಟೆಂಡರ್‌ನ್ನು ಹಾಕಿಬಿಡುತ್ತಾರೋ ಅವರು ಏನು ಮಾಡುತ್ತಾರೆಂದರೆ ಸುಮ್ಮನೆ ಕೈಕಟ್ಟಿಕೊಂಡು ಕುಳಿತುಕೊಂಡು ಬಿಡುತ್ತಾರೆ. ಇಲ್ಲಾ ಆ ರೇಟ್‌ನ್ನು ಕೊಟ್ಟರೆ ಮುಂದಕ್ಕೆ ಹೋಗುತ್ತೇವೆ ಎಂದು ಹೇಳುತ್ತಾರೆ, ಇಲ್ಲ ಹಳೆಯ ಟೆಂಡರ್ ರೇಟ್‌ನ ಪ್ರಕಾರ ಮಾಡಿ ಎಂದರೆ ನಾವು ಹೇಳುತ್ತೇವೆ, ಕಾನೂನಿನ ಪ್ರಕಾರ ನ್ಯಾಚುರಲಿ, ನಾಳೆ ಆಡಿಟ್ ರಿಪೋರ್ಟ್ ಬರುತ್ತದೆ, ಎಜಿಯವರು ಅಬ್ಜಕ್ಟ್ ಮಾಡುತ್ತಾರೆ, ಅಸೆಂಬ್ಲಿಯಲ್ಲಿ ಬರುತ್ತದೆ, ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ಕೇಳುತ್ತಾರೆ, ನಾವು ಯಾಕೆ ಕಿರಿಕಿರಿಯನ್ನು ತೆಗೆದುಕೊಳ್ಳಬೇಕು ಎಂದು ಹೇಳಿ ಅನೇಕ ಅಧಿಕಾರಿಗಳು ಕೆಲಸ ಮಾಡುವುದಿಲ್ಲ. ಆ ಪ್ರಾಜೆಕ್ಟ್‌ಗಳು ಯಾವ ಉದ್ದೇಶದಿಂದ ಲಿಮಿಟೆಡ್ ಪಿರಿಯಡ್‌ನಲ್ಲಿ ಮುಗಿಸಬೇಕು ಎನ್ನುವ ಉದ್ದೇಶವೇನು ಇದೆ, ಅದೂ ಕೂಡ ಆಗುವುದಿಲ್ಲ. ಅದಕ್ಕಾಗಿ ನನ್ನ ಸಲಹೆ ಏನೆಂದರೆ, ಈ ಎಲ್ಲಾ ಪ್ರಾಜೆಕ್ಟ್‌ಗಳಿಗೆ ನಮ್ಮ ಗುಲ್ಬರ್ಗಾದ್ದು ಒಂದೇ ಎಂದು ಹೇಳುತ್ತಿಲ್ಲ. ಇಡೀ ರಾಜ್ಯದಲ್ಲಿರುವಂತಹ ಪ್ರಾಜೆಕ್ಟ್‌ಗಳ ಬಗ್ಗೆ ನೀವು ಒಂದು ರಿವ್ಯೂ ಮಾಡಿ ಏನು ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಇವೆ, ಅದನ್ನು ನೀವು ತೆಗೆದುಹಾಕಲಿಲ್ಲವೆಂದರೆ ವಿಶೇಷವಾಗಿ ನೀರಾವರಿಯಲ್ಲಿ ಪ್ರಗತಿಯಾಗುವುದಿಲ್ಲ. ಇನ್ನೊಂದು ಏನೆಂದರೆ, ಇರಿಗೇಷನ್ ಮಿನಿಸ್ಟರ್‌ರವರಿಗೆ ಬಹಳ ಜನರು ಬ್ಲೇಮ್ ಮಾಡುತ್ತಾರೆ. ಏಕೆಂದರೆ, ನೀರಾವರಿ ಕೆಲಸಗಳೆಲ್ಲವನ್ನೂ ಅವರೇ ಮಾಡಬೇಕೆಂಬ ಅಪೇಕ್ಷೆ ಜನರಿಗೆ ಇರುತ್ತದೆ. ಆದರೆ ಅಲ್ಲಿ ಏನಿದೆ ಎಂದರೆ ನಮ್ಮ ನೀರಾವರಿ ನಿಗಮದ ಕಾನೂನು ಅದರಲ್ಲಿ ಅವರು ಕೇವಲ ಉಪಾಧ್ಯಕ್ಷರಾಗಿರುತ್ತಾರೆ. ಎಲ್ಲಿಯವರೆಗೆ ಮುಖ್ಯಮಂತ್ರಿಗಳ ಅಧ್ಯಕ್ಷರಾಗಿರುವಂತಹ ಸಮಿತಿ ಮೀಟಿಂಗ್‌ನ್ನು ಕರೆಯುವುದಿಲ್ಲ, ಪ್ರತಿ ತಿಂಗಳು ರಿವ್ಯೂ ಮಾಡುವುದಿಲ್ಲ, ಅಲ್ಲಿಯವರೆಗೆ ಇದು ಪ್ರಗತಿಯಾಗುವುದಿಲ್ಲ. ಏಕೆಂದರೆ ಅದರಲ್ಲಿ ಫೈನಾನ್ಸ್ ಸೆಕ್ರೆಟರಿ ಇರುತ್ತಾರೆ. ಚೀಫ್ ಮಿನಿಸ್ಟರ್ ಪ್ರಿನ್ಸಿಪಲ್ ಸೆಕ್ರೆಟರಿಯವರು ಇರುತ್ತಾರೆ, ಸಿ.ಎಂ. ಇರುತ್ತಾರೆ. ಬೇರೆ ಎಲ್ಲಾ ಇಲಾಖೆಯ 5–6 ಸೆಕ್ರೆಟರಿಯವರುಗಳು ಇದ್ದ ಕಾರಣ ಯಾವ ಒಂದು ನಿರ್ಣಯವನ್ನೂ ಇರಿಗೇಷನ್ ಮಿನಿಸ್ಟರ್‌ರವರು ತಕ್ಷಣ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ ವಿಶೇಷವಾಗಿ ಈ ಬಗ್ಗೆ ಮೀಟಿಂಗ್‌ನ್ನು ಮಾಡಿ ಇಂತಹ ಪ್ರಾಕ್ಟಿಕಲ್ ಡಿಫಿಕಲ್ಟೀಸ್‌ನ್ನು ತೆಗೆದರೆ 'ಏ' ಸ್ಕೀಂನಲ್ಲಿರುವಂತಹ ಪ್ರಾಜೆಕ್ಟ್‌ಗಳು ಕಂಪ್ಲೀಟ್ ಮಾಡುವುದಕ್ಕಾಗುತ್ತದೆ. ಇಲ್ಲದೇ ಹೋದರೆ ಪುನಃ ನಾವು ಇದನ್ನು ಮುಂದಕ್ಕೆ ಒಯ್ಯತಕ್ಕಂತಹ ಆಗುತ್ತದೆ. ಈಗ ಅವರು ಹೇಳಿದ್ದಾರೆ 29 ಪ್ರಾಜೆಕ್ಟ್ ಕಂಪ್ಲೀಟ್ ಮಾಡಿದ್ದೇವೆ. ಈಗಾಗಲೇ 99 ಪರ್ಸೆಂಟ್ ಮುಗಿಯುತ್ತಾ ಬಂದಿದೆ. ಇವರು ಕೆಲವು ಕಡೆ ಬರೀ ಕಲ್ಲು ಹಚ್ಚುವ ಕೆಲಸ ಮಾತ್ರ ಇದೆ. ಆದ್ದರಿಂದ ಕ್ರೆಡಿಟ್

ಅವರಿಗೇ ಹೋಗುತ್ತದೆ. "ಮೈನ್ ಕರೆ ಮುರ್ಗಿಸಾಬ್, ಅಂಡಕಾಯ ಫಕೀರ್ ಸಾಬ್" ಎಂದಾಗುತ್ತದೆ. ಆಗಲಿ ಪರವಾಗಿಲ್ಲ, ಅವರಾದರೂ ಹೋಗಿ ಅದನ್ನು ಉದ್ಘಾಟನೆ ಮಾಡಿ ಅದು ಮಾರ್ಕೆಂಡಯ್ಯ ಇರಬಹುದು, ಬೆಣ್ಣೆತೋರಾ ಇರಬಹುದು, ಲೋಯರ್ ಮುಲ್ಲಾಮಾರಿ ಇರಬಹುದು. ಇವೆಲ್ಲಾ ಪ್ರಾಜೆಕ್ಟ್‌ಗಳು, ಹರಿನಾಲಾ ಇರಬಹುದು ಇವೆಲ್ಲವೂ ಕಂಪ್ಲೀಟಾಗಿವೆ. ಕಂಪ್ಲೀಟ್ ಆಗಿರುವ ಬಗ್ಗೆ ಅವರು ಹೋಗಿ ಉದ್ಘಾಟನೆ ಮಾಡಿದರೆ ಬಹಳ ಸಂತೋಷ. ಈ ಪ್ರಾಕ್ಟಿಕಲ್ ಡಿಫಿಕಲ್ಟೀಸನ್ನೂ ತೆಗೆದುಹಾಕಬೇಕಾದರೆ ಮಾನ್ಯ ಮುಖ್ಯಮಂತ್ರಿಗಳಿಗೆ ಜೊತೆಯಲ್ಲಿ ನೀವು ವಿಶೇಷವಾದಂತಹ ಸಭೆಯನ್ನು ಮಾಡಿದಾಗ ಮಾತ್ರ ನಿಮಗೆ ಕೆಲಸ ಮಾಡುವುದಕ್ಕಾಗುತ್ತದೆ. ಇಲ್ಲದಿದ್ದರೆ ಅವುಗಳು ಹೇಳಿಕೆಗಳೇ ಆಗುತ್ತದೆ, ಎನ್ನುವುದನ್ನು ನಾನು ಅವರಿಗೆ ಕೇಳಬಯಸುತ್ತಿದ್ದೇನೆ. ದಯವಿಟ್ಟು ಈ ಕೆಲಸವನ್ನು ಮಾಡುತ್ತೀರಾ, ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ: ನಮ್ಮ ನಾಯಕರು ತುಂಬಾ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ತಾವು ಹೇಳಿದ ಹಾಗೆ ಪ್ರತಿ ತಿಂಗಳೂ ಕೂಡ ನಾವು ರಿವ್ಯೂ ಶುರು ಮಾಡಿದ್ದೇವೆ. ಯೋಜನೆಯ ಪ್ರಾಜೆಕ್ಟ್ ಹತ್ತಿರವೂ ಕೂಡ ಹೋಗುತ್ತಿದ್ದೇವೆ, ಜೊತೆಗೆ ಅಧಿಕಾರಿಗಳ ಜೊತೆ ಇಟ್ಟುಕೊಂಡು ರಿವ್ಯೂ ಮಾಡಿಕೊಂಡು ಎರಡು ತರಹ ಅಂದರೆ ಫೈನಾನ್ಷಿಯಲ್ ಇಂಪ್ರೂವ್‌ಮೆಂಟ್ ಏನಾಗಿದೆ, ಫಿಸಿಕಲ್ ಇಂಪ್ರೂವ್‌ಮೆಂಟ್ ಏನಾಗಿದೆ, ಅದರ ಬಗ್ಗೆ ಗಮನಕೊಟ್ಟು ಆ ದಿಕ್ಕಿನಲ್ಲೂ ಕೂಡ ಗಮನವನ್ನು ಕೊಡುತ್ತಿದ್ದೇವೆ. ಈಗಾಗಲೇ ಪ್ರತಿ ತಿಂಗಳೂ ಕೂಡ ನೀರಾವರಿ ನಿಗಮದ ಅಧ್ಯಕ್ಷರು ಸನ್ಮಾನ್ಯ ಮುಖ್ಯಮಂತ್ರಿಗಳು ಇದ್ದರೂ ಕೂಡ, ಮಾನ್ಯ ಮುಖ್ಯಮಂತ್ರಿಗಳು ನಮ್ಮ ನಿಗಮದ ಸಭೆಗೆ ಪ್ರತಿತಿಂಗಳು ಬರುತ್ತಿದ್ದಾರೆ. ಒಂದೊಂದು ನಿಗಮದ ಸಭೆಗಳು 3 ರಿಂದ 4 ಗಂಟೆಗಳ ಕಾಲ ನಡೆಯುತ್ತಿದೆ. ಆ ಸಭೆಯಲ್ಲಿ ಪ್ರತಿಯೊಂದು ವಿಚಾರದ ಬಗ್ಗೆ ಚರ್ಚೆ ಮಾಡಿಕೊಂಡು ಅಭಿವೃದ್ಧಿ ಹಾಗೂ ನೀರಾವರಿ ಕಾಮಗಾರಿಗಳಿಗೆ ಯಾವುದೇ ಕಾರಣಕ್ಕೂ ನಿಲ್ಲಬಾರದು ಎಂಬ ಒತ್ತು ಮುಖ್ಯಮಂತ್ರಿಗಳದ್ದು ಹಾಗೂ ಸರ್ಕಾರದ್ದು ಇದೆ. ಇದರ ಜೊತೆಗೆ ಈಗಾಗಲೇ 'ಎ' ಸ್ಕೀಂನ ಮುಖಾಂತರ ಮುಗಿಯಬೇಕಾದಂತಹ ಕಾಮಗಾರಿಗಳು ಏನಿವೆ, ಅದಕ್ಕೂ ಕೂಡ ಸಂಪೂರ್ಣವಾದ ಒತ್ತನ್ನು ಕೊಡಬೇಕೆಂದು ಪ್ರಯತ್ನವನ್ನು ಸರ್ಕಾರ ಈಗಾಗಲೇ ಮಾಡುತ್ತಿದೆ. ಇದರ ಜೊತೆಗೆ 'ಎ' ಸ್ಕೀಂನಲ್ಲಿರುವಂತಹ ಆದ್ಯತೆಯ ಮೇರೆಗೆ ಅದನ್ನು ಮುಗಿಸುವಂತಹ ಪ್ರಯತ್ನವನ್ನು ಕೂಡ ನಾವು ಮಾಡುತ್ತೇವೆ. ಇದರ ಜೊತೆಗೆ ತಾವು ಹೇಳಿದಿರಿ, 39 ಪ್ರಾಜೆಕ್ಟ್‌ಗಳ ಬಗ್ಗೆ ಅದು ಸತ್ಯ, ಇನ್ನು ಕೆಲವು

ಮುಗಿಯುವುದರಲ್ಲಿದೆ. ಆದರೂ 30–35 ವರ್ಷಗಳಾದರೂ ಕೂಡ ಯಾಕೆ ಮುಗಿಯಲಿಲ್ಲವೆಂಬುದು ನನಗಂತೂ ಗೊತ್ತಿಲ್ಲ. 9 ಕೋಟಿ ರೂಪಾಯಿಗಳಲ್ಲಿ ಮುಗಿಯಬೇಕಾದಂತಹ ಯೋಜನೆಯು 450 ಕೋಟಿ ರೂಪಾಯಿಗಳಾದರೂ ಕೂಡ ಏತಕ್ಕೆ ಮುಗಿದಿಲ್ಲ. ಅದರ ಬಗ್ಗೆ ದೇವರಿಗೆ ಗೊತ್ತು, ಅದರ ಬಗ್ಗೆ ನಾವು ಯೋಚನೆ ಮಾಡಿದರೆ ಏಕೆ ಮುಗಿಯಲಿಲ್ಲವೆಂದು ಯೋಚನೆ ಮಾಡದೆಯೇ ಈ 39 ಯೋಜನೆಗಳಿಗೆ ಹಣವನ್ನು ಸೆಫರೇಟಾಗಿ ತೆಗೆದಿಟ್ಟಿದ್ದೇವೆ ಇದರ ಬಗ್ಗೆ ತಮಗೆ ಗೊತ್ತಿದೆ. ಪ್ರತಿಯೊಂದು ಯೋಜನೆಗೆ ಒಬ್ಬೊಬ್ಬ ಅಧಿಕಾರಿಗಳನ್ನು ನೇಮಕ ಮಾಡಿದ್ದೇವೆ. ಅವರಿಗೆ ಟೈಮ್‌ಬೌಂಡ್ ಪ್ರೋಗ್ರಾಮ್‌ನ್ನು ಸಹ ಕೊಟ್ಟಿದ್ದೇವೆ. ಈ ತಿಂಗಳು ಹಾಗೂ ಮುಂದಿನ ತಿಂಗಳು ಏನು ಕೆಲಸ ಮಾಡಿದ್ದಾರೆ ಎಂಬ ಬಗ್ಗೆ ಯೋಚನೆ ಮಾಡುತ್ತಿದ್ದೇವೆ. ಹೀಗಾಗಿ ತಮ್ಮ ಚಿಂತನೆಗಳು ಏನಿವೆ, ಅನೇಕವರ್ಷಗಳಿಂದ ನೀರಾವರಿ ಇಲಾಖೆಯ ಬಗ್ಗೆ ತಾವು ಸಾಕಷ್ಟು ಶ್ರಮವಹಿಸಿ ಸೇವೆಯನ್ನು ಮಾಡಿದ್ದೀರಿ, ನಾನು ತಮ್ಮ ಸೇವೆಯ ಬಗ್ಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ತಾವು ಏನು ಹೆಜ್ಜೆಯನ್ನು ಇಟ್ಟು ಮುಂದೆ ಹೋಗಿದ್ದೀರೋ ಆ ಎಲ್ಲಾ ಕಾಮಗಾರಿಗಳನ್ನೂ ಕೂಡ ಖಂಡಿತವಾಗಿಯೂ ಈ ವರ್ಷ ಮುಗಿಸುತ್ತೇವೆ. ತಮ್ಮ ಕಳಕಳಿಯ ಪ್ರಕಾರವೇ ಸರ್ಕಾರ ನಡೆಯುತ್ತದೆ ಎನ್ನುವಂತಹ ಮಾತನ್ನು ಅಧ್ಯಕ್ಷರೆ, ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಕೊನೆಯದು ಏನೆಂದರೆ, ಮಹಾರಾಷ್ಟ್ರದಲ್ಲಿ ಅತಿವೃಷ್ಟಿಯಾಗಿದೆ, ಅದರಿಂದ ಏನಾಗುತ್ತಿದೆ ಎಂದರೆ, ಈ ಅಲಮಟ್ಟಿ ಡ್ಯಾಂ ಫುಲ್ ಆದ ಮೇಲೆ ಪುನಃ ಆ ನೀರನ್ನು ನಾರಾಯಣಪುರ ಡ್ಯಾಂಗೆ ಬಿಡುತ್ತಾರೆ. ಈ ಮಹಾರಾಷ್ಟ್ರದವರು ಯಾವಾಗಲೂ ಕೂಡ ಕಾಲಕೆರೆದು ಜಗಳವನ್ನು ತೆಗೆಯುವುದು ಮಾಡುತ್ತಾರೆ ಅದರ ಬಗ್ಗೆ ತಮಗೆ ಗೊತ್ತಿದೆ. ಈ ಅಲಮಟ್ಟಿ ನೀರನ್ನು ನಾವು ನಿಲ್ಲಿಸುತ್ತೇವೆಂದು ಹೇಳಿ ಅವರ ಕೊಲ್ಲಾಪುರ ಏರಿಯಾ ಸಬ್‌ಮರ್ಜ್ ಆಗುತ್ತದೆ, ಅದಕ್ಕಾಗಿ ನೀವು ಅಲಮಟ್ಟಿ ಡ್ಯಾಂನ ಹೈಟನ್ನು ಕಡಿಮೆ ಮಾಡಿ ಎಂದು ಈಗಾಗಲೇ ಅವರು ಕೋರ್ಟಿಗೆ ಹೋಗಿದ್ದರು. ಕೋರ್ಟು ನಮ್ಮ ಪರವಾಗಿ ಒಂದು ನಿರ್ಣಯವನ್ನು ಕೊಟ್ಟಿದಕ್ಕಾಗಿ ಸ್ವಲ್ಪ ಮಟ್ಟಿಗೆ ನಮಗೆ ಸಮಾಧಾನವಾಗಿದೆ. ಆದರೂ ಕೂಡ 524ಕ್ಕೆ ಏನು ನಮ್ಮ ಹೈಟ್ ಇರಬೇಕಾಗಿತ್ತೋ ಕೊನೆಗೆ ಅದಕ್ಕೆ ಇನ್ನೂ ಪರ್ಮಿಶನ್ ಇಲ್ಲ. 519 ಕ್ಕೆ ಏನು ನಾವು ಸಧ್ಯಕ್ಕೆ ನಿಲ್ಲಿಸುತ್ತಿದ್ದೇವೆ. ಅದಕ್ಕೆ ಇವತ್ತಿನ ದಿವಸ ಅದಕ್ಕೂ ಕೂಡ ಅಬ್ಜೆಕ್ಟ್ ಮಾಡುತ್ತಿದ್ದರೂ ಕೊನೆಗೆ ಅದು ನಮ್ಮ ಪರವಾಗಿ ಆಗಿದೆ. ನಾವು 524ಕ್ಕೆ ನಿಲ್ಲಿಸುವುದಕ್ಕೆ ಕಡಿವಾಣವನ್ನು ಹಾಕಬೇಕೆಂದು ಅವರು ಪದೇಪದೇ ನಮ್ಮ

ಮೇಲೆ ಗೂಬೆಯನ್ನು ಕೂರಿಸಿ ನಮ್ಮ ಏರಿಯಾಯೆಲ್ಲಾ ಸಬ್‌ಮರ್ಜ್ ಆಗುತ್ತದೆ; ಎನ್ನುವಂತಹ ಮಾತನ್ನು ಅವರು ಹೇಳುತ್ತಿದ್ದಾರೆ. ಅದಕ್ಕೆ ಇತ್ತೀಚೆಗೆ ಬಾಂಬೆಯಲ್ಲಿ ಮಳೆ ಬಂದ ಮೇಲೆ ಕೊಯ್ನಾ ಏರಿಯಾದಲ್ಲಿ ಮಳೆ ಬಂದ ಮೇಲೆ ನ್ಯಾಚುರಲಿ ಈ ಇಷ್ಯೂ ಪುನಃ ರೈಸ್ ಆಗುತ್ತದೆ. ಅದಕ್ಕಾಗಿ ದಯವಿಟ್ಟು ಮಹಾರಾಷ್ಟ್ರ ಸರ್ಕಾರದ ಜೊತೆ ಸಂಪರ್ಕವನ್ನು ಮಾಡಿ ನಮ್ಮ ಇಂಜಿನಿಯರುಗಳಿಗೂ ಕೂಡ ಇದರ ಬಗ್ಗೆ ವಾರ್ನಿಂಗ್ ಮಾಡಿ ಆ ಭಾಗದಲ್ಲಿ ಸಬ್‌ಮರ್ಜ್ ಆಗದ ರೀತಿಯಲ್ಲಿ ನೋಡಿಕೊಳ್ಳುವುದು ಮಾಡಬೇಕು. ಟೈಮ್‌ನಲ್ಲಿ ನೀರನ್ನು ಬಿಡಬೇಕಾದರೆ ಟೈಮ್‌ಲಿ ನೀರನ್ನು ಬಿಡಿ, ಟೈಮ್‌ಲಿ ನೀರನ್ನು ಬಿಡುವಂತಹ ಅವಶ್ಯಕತೆ ಇಲ್ಲವೆಂದರೆ ಎಷ್ಟರಮಟ್ಟಿಗೆ ನಾವು ರೆಸ್ಪೋರ್ ಮಾಡಿಕೊಳ್ಳಬೇಕು, ಅಷ್ಟಾದರೂ ಕೂಡ ರೆಸ್ಪೋರ್ ಮಾಡಿಕೊಳ್ಳುವಂತಹ ಕೂಡ ತಾವು ಮಾಡಬೇಕು. ಇಲ್ಲದೆ ಹೋದರೆ ಪುನಃ ಇದು ವಾದಗ್ರಸ್ಥವಾಗಿ ಶ್ರೀಮಾನ್ ಧರ್ಮಸಿಂಗ್‌ಜಿಯವರು ಇದ್ದಾಗ ಯಾವ ರೀತಿಯಾಗಿ ಇದೊಂದು ವಾದವಿವಾದ ನಡೆದಿತ್ತು, ಪುನಃ ಅದಕ್ಕೆ ಹಾದಿಯಾಗುತ್ತದೆ. ದಯವಿಟ್ಟು ಅದರ ಬಗ್ಗೆಯೂ ಕೂಡ ತಾವು ಮಹಾರಾಷ್ಟ್ರ ಸರ್ಕಾರದವರ ಜೊತೆ ಮಾತನಾಡಿ ಇದನ್ನು ಸಾಲ್ವ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಹಾರಾಷ್ಟ್ರದಲ್ಲಿ ವಿಶೇಷವಾಗಿ ಬಾಂಬೆಯಲ್ಲಿ ಸಾಕಷ್ಟು ಮಳೆಯಾಗಿ ಈಗಾಗಲೇ ಕೊಯ್ನಾ ಏರಿಯಾದಲ್ಲಿ ನೀರು ಜಾಸ್ತಿಯಾಗಿರುವ ಅಂಶವನ್ನು ನಾವೆಲ್ಲಾ ಪತ್ರಿಕೆಯಲ್ಲಿ ನಾವು ಓದುತ್ತಿದ್ದೇವೆ. ನಿನ್ನೆ ತಾನೇ ನಾನು ಕಂದಾಯ ಸಚಿವರೊಂದಿಗೆ ಈ ವಿಚಾರಗಳನ್ನು ಮಾತನಾಡಿದ್ದೇನೆ. ಅವರೂ ಕೂಡ ತಿಳಿಸಿದ್ದಾರೆ. ಮಹಾರಾಷ್ಟ್ರ ಸರ್ಕಾರದ ಎಲ್ಲಾ ಅಂಶಗಳನ್ನು ನಮ್ಮ ಹಿರಿಯ ಸದಸ್ಯರಾದ ಸನ್ಮಾನ್ಯ ಖರ್ಗೆಯವರು ಹೇಳಿರುವುದೆಲ್ಲಾ ಸತ್ಯ. ಮಹಾರಾಷ್ಟ್ರ ಸರ್ಕಾರ ಅನೇಕ ವಿಚಾರಗಳಲ್ಲಿ ನಮಗೆ ತೊಂದರೆಯನ್ನು ಕೊಡುತ್ತಲೇ ಬಂದಿದೆ, ಯಾವುದೇ ವಿಚಾರದಲ್ಲಿಯೂ ನಮಗೆ ಸಹಕರಿಸಿಲ್ಲ. ಆದರೂ ಕೂಡ ಈ ವಿಚಾರದಲ್ಲಿ ನಮ್ಮ ಸರ್ಕಾರ ಮಹಾರಾಷ್ಟ್ರ ಸರ್ಕಾರದೊಂದಿಗೆ ಪತ್ರ ವ್ಯವಹಾರ ಮಾಡಿ, ಅದಕ್ಕೆ ಸಂಬಂಧಪಟ್ಟವರಿಗೆ ತಿಳಿಸಿ ಅತಿವೃಷ್ಟಿಯಿಂದ ಏನು ತೊಂದರೆಯಾಗಬಹುದೆಂದು ಇದೆ, ಅವರು ನೀರು ಬಿಡುವ ಪ್ರಯತ್ನವನ್ನು ಏನು ನಡೆಸಿದ್ದಾರೆ, ಅದರ ಬಗ್ಗೆ ಪತ್ರ ವ್ಯವಹಾರವನ್ನು ಮಾಡಿ ನಮ್ಮ ಕರ್ನಾಟಕ ರಾಜ್ಯದ ಆ ಭಾಗದ ಜನತೆಗೆ ತೊಂದರೆಯಾಗದ ರೀತಿಯಲ್ಲಿ ಸರ್ಕಾರ ಗಮನ ಕೊಡುತ್ತದೆಂದು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ.